**ಓ.ಎಸ್. ನಂಃ 33/2023**
**ಡಿ.ಡಬ್ಲ್ಯೂಃ 2**

ದಿನಾಂಕಃ 30-01-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿಯ ಪರ ಶ್ರೀ ಡಿ.ಎಂ. ವಕೀಲರಿಂದಃ

ಈ ದಾವೆಯನ್ನು ಪಾರ್ವತಮ್ಮ, ಮಲ್ಲಯ್ಯ ಮತ್ತು ಹಣಮಂತ ರವರು ಪ್ರತಿವಾದಿಯರಾದ ಹಣಮಂತು, ಮಲ್ಲಿಕಾರ್ಜುನ, ಶರಣಪ್ಪ ಹಾಗೂ ಮಡಿವಾಳ ರವರ ವಿರುದ್ಧ ದಾವೆ ಸಲ್ಲಿಸಿದ್ದಾರೆ. ದೇವಪ್ಪ, ಸಾಯಿಬಣ್ಣ, ಮಲ್ಲಯ್ಯ, ಹಣಮಂತ, ಪಾರ್ವತಿ, ಅಯ್ಯಣ್ಣ, ಗಂಗಮ್ಮ ಹಾಗೂ ಶಿವಪ್ಪ ರವರ ಜಮೀನಿನ ಸರ್ವೆ ನಂ.37 ಆಗಿರುತ್ತದೆ. ಪ್ರತಿವಾದಿಯರ ಜಮೀನಿನ ಸರ್ವೆ ನಂ.36 ಆಗಿರುತ್ತದೆ. ಸದರಿ ಪಕ್ಷಗಾರರು ತಮ್ಮ ತಮ್ಮ ಸರ್ವೆ ನಂಬರಿನ ಜಮೀನುಗಳ ಕಬ್ಜೆದಾರರಾಗಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸರ್ವೆ ಮಾಡಿದ ನಂತರ ಪ್ರತಿವಾದಿಯರಿಗೆ ಜಮೀನು ಬರಬೇಕೆಂದು ಗೊತ್ತಾದಾಗ ವಾದಿ ಜಮೀನು ಬಿಟ್ಟುಕೊಟ್ಟಿದ್ದರು ಆದರೆ ಪುನಃ ಅತೀಕ್ರಮಣ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ಮಾಡುವ ಸಮಯದಲ್ಲಿ ಮುಖಂಡರೊಂದಿಗೆ ನಾನು ಸಹ ಹಾಜರಿದ್ದೆನು. ಆಗ ಭೂ-ಮಾಪಕರು ಸಾಕ್ಷಿಯಾಗಿ ನನ್ನ ಸಹಿ ಪಡೆದುಕೊಂಡಿದ್ದರು. ಸದರಿ ಸರ್ವೆ ದಾಖಲೆಯನ್ನು ಪ್ರತಿವಾದಿಯರು ಹಾಜರು ಮಾಡಿದ್ದರೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಭೂ-ಮಾಪಕರು ವಾದಿಯರಿಗೂ ಸಹ ನೋಟಿಸ್ ಕೊಟ್ಟಿದ್ದರು. ನಿಡಿ-15 ರ ನೋಟಿಸಿನಲ್ಲಿ ವಾದಿಯರ ಸಹಿ ಇಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ಕಚೇರಿಯಿಂದ ನೋಟಿಸು ಕಳುಹಿಸಿದ್ದರು ಎಂದು ನುಡಿಯುತ್ತಾರೆ. ಸರ್ವೆ ಮಾಡುವ ದಿನ ನೋಟಿಸ್ ಕೊಟ್ಟಿಲ್ಲ, ಅದರ ಪೂರ್ವದಲ್ಲಿಯೇ ನೋಟಿಸ್ ಕೊಟ್ಟಿದ್ದರು. ನಿಡಿ-18 ರ ನೋಟಿಸ್ ನಲ್ಲಿಯೂ ವಾದಿಯರ ಸಹಿ ಇಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ಆದರೆ ಭೂ-ಮಾಪಕರ ಕಚೇರಿಯಿಂದ ನೋಟಿಸ್ ಕಳುಹಿಸಿರುತ್ತಾರೆ ಎಂದು ನುಡಿಯುತ್ತಾರೆ.

2. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ಪ್ರಮಾಣ ಪತ್ರದ 3 ನೇ ಖಂಡಿಕೆಯಲ್ಲಿ 1 ನೇ ಪ್ರತಿವಾದಿ ಹಣಮಂತ 03 ಗುಂಟೆ ಜಮೀನು

ಕಬಳಿಸಿರುತ್ತಾರೆ ಎಂದು ಬರೆಸಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ವಾದಿಯರು ತಮ್ಮ ಹಿರಿಯರಿಂದ ಬಂದ ಜಮೀನಿನಲ್ಲಿ ಸ್ವಾಧೀನದಲ್ಲಿದ್ದಾರೇ ಹಾಗೂ ಪ್ರತಿವಾದಿಯರೂ ಸಹ ತಮ್ಮ ಹಿರಿಯರಿಂದ ಬಂದ ಜಮೀನಿನಲ್ಲಿ ಸ್ವಾಧೀನ ಇದ್ದಾರೆ ಎಂದರೆ ಸಾಕ್ಷಿ ವಾದಿಯರು 23 ಗುಂಟೆ ಜಮೀನು ಒತ್ತುವರಿ ಮಾಡಿದ್ದು ಅದನ್ನು ಬಿಟ್ಟುಕೊಡಬೇಕೆಂದು ನುಡಿಯುತ್ತಾರೆ. ವಾದಿಯರು ಪ್ರತಿವಾದಿಯರ ಜಮೀನು ಒತ್ತುವರಿ ಮಾಡದಿದ್ದರೂ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಮತ್ತು ವಾದಿಯರ ನಡುವೆ ಮೊದಲಿನಿಂದ ವೈಶಮ್ಯ ಇರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ವಾದಿಯರ ವಿರುದ್ಧ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

3. ಜಮೀನು ಅಳತೆ ಮಾಡಲು ಪ್ರತಿವಾದಿಯರು ಅರ್ಜಿ ನೀಡಿದ್ದರು. ವಾದಿಯರಿಗೆ ನೋಟಿಸ್ ನೀಡದೇ ನಾನು ಹಾಗೂ ಪ್ರತಿವಾದಿಯರು ನಮಗೆ ಬೇಕಾದಂತೆ ಅಳತೆ ದಾಖಲೆಗಳನ್ನು ತಯಾರಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿಯರು ಪ್ರತಿವಾದಿಯರ ಯಾವುದೇ ಜಮೀನು ಒತ್ತುವರಿ ಮಾಡದಿದ್ದರು ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಜಮೀನು ಒತ್ತುವರಿ ಆಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲದಿದ್ದರೂ ವಾದಿಯರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ನನ್ನ ಜಮೀನಿನ ಪಹಣಿ ಪತ್ರಿಕೆಯನ್ನು ಹಾಜರು ಮಾಡಿಲ್ಲ. ಹಳೇ ವೈಶ್ಯಮ್ಯದಿಂದ ವಾದಿಯರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ನ್ಯಾಯಾಲಯದ ಪ್ರಶ್ನೆಗಳುಃ</u>

ಪ್ರಶ್ನೆಃ-1 ಯಾರು ಯಾರ ಜಮೀನನ್ನು ಒತ್ತುವರಿ ಮಾಡಿರುತ್ತಾರೆ?

ಉತ್ತರಃ- ಪ್ರತಿವಾದಿಯರ ಜಮೀನನ್ನು ವಾದಿಯರು ಒತ್ತುವರಿ ಮಾಡಿರುತ್ತಾರೆ.

ಪ್ರಶ್ನೆಃ-2 1 ನೇ ಪ್ರತಿವಾದಿಯ ಎಷ್ಟು ಜಮೀನು ಒತ್ತುವರಿ ಆಗಿದೆ?

ಉತ್ತರಃ- 1 ನೇ ಪ್ರತಿವಾದಿಯ ಜಮೀನಿನ ದಕ್ಷಿಣ ಭಾಗದ 03 ಗುಂಟೆ ಜಮೀನನ್ನು ಅಯ್ಯಪ್ಪ ರವರು ಒತ್ತುವರಿ ಮಾಡಿದ್ದಾರೆ.

ಪ್ರಶ್ನೆ:-3 2 ನೇ ಪ್ರತಿವಾದಿಯ ಎಷ್ಟು ಜಮೀನು ಒತ್ತುವರಿ ಆಗಿದೆ?

ಉತ್ತರ:- 2 ನೇ ಪ್ರತಿವಾದಿಯ ಜಮೀನಿನ ದಕ್ಷಿಣ ಭಾಗದ 08 ಗುಂಟೆ ಜಮೀನನ್ನು ದೇವಪ್ಪ ರವರು ಒತ್ತುವರಿ ಮಾಡಿದ್ದಾರೆ.

ಪ್ರಶ್ನೆ:-4 3 ನೇ ಪ್ರತಿವಾದಿಯ ಎಷ್ಟು ಜಮೀನು ಒತ್ತುವರಿ ಆಗಿದೆ?

ಉತ್ತರ:- 3 ನೇ ಪ್ರತಿವಾದಿಯ ಜಮೀನಿನ ದಕ್ಷಿಣ ಭಾಗದ 07 ಗುಂಟೆ ಜಮೀನನ್ನು ಸಾಬಣ್ಣ ರವರು ಒತ್ತುವರಿ ಮಾಡಿದ್ದಾರೆ.

ಪ್ರಶ್ನೆ:-5 4 ನೇ ಪ್ರತಿವಾದಿಯ ಎಷ್ಟು ಜಮೀನು ಒತ್ತುವರಿ ಆಗಿದೆ?

ಉತ್ತರ:- 4 ನೇ ಪ್ರತಿವಾದಿಯ ಜಮೀನಿನ ದಕ್ಷಿಣ ಭಾಗದ 05 ಗುಂಟೆ ಜಮೀನನ್ನು ಸಾಬಣ್ಣ ರವರು ಒತ್ತುವರಿ ಮಾಡಿದ್ದಾರೆ.

(ಸಾಕ್ಷಿಯ ಪ್ರಮಾಣ ಪತ್ರದ 3 ನೇ ಖಂಡಿಕೆಯಲ್ಲಿ ಗೊಂದಲ ಇರುವುದರಿಂದ ಈ ಮೇಲ್ಕಂಡ ನ್ಯಾಯಾಲಯದ ಪ್ರಶ್ನೆಗಳನ್ನು ಕೇಳಲಾಗಿರುತ್ತದೆ.)

ಮರು ವಿಚಾರಣೆಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ